ಓರಣಗೊಳಿಸಿದವು. ದಿನವೂ ಮಾಡಿಡುವ ಹಚ್ಚಿದವಲಕ್ಕಿಯ ಬದಲು, ಶೇಂಗಾ ಗಜ್ಜರಿ ಬೀನ್ಸ್ ಹಸಿಮೆಣಸಿನಕಾಯಿ ಅಲ್ಲಾ ಕೊತ್ತಂಬರಿ ಸೊಪ್ಪು ಎಲ್ಲಾ ಹಾಕಿ ಚೂರು ಎಣ್ಣೆ ಜಾಸ್ತಿ ಬಳಸಿ ಘಮಘಮ ಅವಲಕ್ಕಿ ಒಗ್ಗರಣೆ ಸಿದ್ಧಪಡಿಸಿದಳು.

ತನ್ನ ಹಾಗೂ ಇತರರ ಅಪ್‌ಡೇಟ್‌ಗಳಿಗೆಲ್ಲ ಭಿನ್ನವಾಗಿ ಪ್ರತಿಕ್ರಿಯೆ ನೀಡುವ, ಈ ಸತ್ಯ ಹರಿಶ್ಚಂದ್ರ ಎಂಬ ಅನಾಮಿಕನ ವಿಷಯ ಸರಸ್ವತಿ ಆಗಾಗ ಶಂಕರನ ಬಳಿ ಪ್ರಸ್ತಾಪಿಸುತ್ತಿದ್ದಳಾದರೂ, ಇಂದು ಆತ ನಮ್ಮ ಮನೆಯನ್ನೇ ಅರಸಿ ಬರುವ ಸಂಗತಿಯನ್ನು ಶಂಕರನ ಬಳಿ ಹೇಳದೇ ಇರುವುದು ಹೇಗೆ ಅನ್ನುವ ಚಿಂತೆಯಲ್ಲೇ ಸ್ವಲ್ಪ ಹೊತ್ತು ಆತಂಕಗೊಂಡಿದ್ದಳು. ಶಂಕರ ಬ್ಯಾಂಕಿನಿಂದ ಬಂದ ಕೂಡಲೇ ತಕ್ಷಣ ಈ ಸತ್ಯ ಹರಿಶ್ಚಂದ್ರನ ಆಗಮನದ ಸಂಗತಿಯನ್ನು ಅವನೊಟ್ಟಿಗೆ ಹೇಳಿಬಿಡುವುದೇ ವಾಸಿ ಅಂದುಕೊಂಡಳು. ಆರಕ್ಕೆ ಆಫೀಸು ಬಿಟ್ಟರೆ ಶಂಕರ ಆರೂವರೆಗೆಲ್ಲ ಮನೆಯಲ್ಲಿರುತ್ತಿದ್ದ. ಹಾಗೇ ಅರ್ಧ ಗಂಟೆ ಸರಸ್ವತಿ ಕೊಡುವ ತಿಂಡಿ ತೀರ್ಥ ಮುಗಿಸಿ ರೆಸ್ಟ್ ಮಾಡುತ್ತಿದ್ದ. ಸರಸ್ವತಿ ರಾತ್ರೆಯ ಅಡುಗೆಯವರೆಗೆ ಪುನಃ ಒಂದು ಸುತ್ತು ಫೇಸ್‌ಬುಕ್ ನೋಡುತ್ತಿದ್ದಳು, ಇದು ಅವರ ಪ್ರತಿ ಸಂಜೆಯ ದಿನಚರಿ.

'ಇಬ್ಬರೂ ಜೊತೆಯಲ್ಲೇ ಬಂದುಬಿಟ್ಟರೆ ಇನ್ನೂ ಸುರುಳೀತ. ಫೋನ್ ನಂಬರ್ ಕೂಡ ಶಂಕರನದೇ ಕೊಟ್ಟಿದ್ದೇನೆ, ಯಾವ ಸಮಸ್ಯೆಯೂ ಇಲ್ಲ' ಅಂದುಕೊಳ್ಳುತ್ತ ಈಗ ಸರಸ್ವತಿ ತನ್ನನ್ನೇ ತಾನು ಸಮಾಧಾನ ಪಡಿಸಿಕೊಂಡಳು. ಆದರೂ ಬೆಳಿಗ್ಗೆಯಿಂದ ಆ ಸತ್ಯ ಹರಿಶ್ಚಂದ್ರನ ಪೂರ್ಣ ಮಾಹಿತಿ ಕಂಡು ಹಿಡಿಯಲು ತನಗೆ ತಿಳಿದ ಎಲ್ಲ ಮಾರ್ಗದಿಂದಲೂ ಪತ್ತೇದಾರಿ ಕೆಲಸ ನಡೆಸಿದ್ದಳು. ಆದರೆ, ಅವನ ಯಾವ ಸರಿಯಾದ ವಿವರಗಳೂ ಅಲ್ಲಿ ದೊರಕದೇ ಇನ್ನಷ್ಟು ಸಂಶಯಕ್ಕೊಳಗಾಗುವಂತಾಗಿತ್ತು.

ಹರಿಶ್ಚಂದ್ರನ ಉದ್ಯೋಗದ ಮಾಹಿತಿ ಇರಬೇಕಾದಲ್ಲಿ ನಿರುದ್ಯೋಗಿ ಅಂತಲೂ, ಶಿಕ್ಷಣದ ವಿವರ ಇರಬೇಕಾದಲ್ಲಿ ಅಶಿಕ್ಷಿತ ಅಂತಲೂ, ಊರು ಅಂದಿದ್ದಲ್ಲಿ ವಿಶ್ವ ಅಂತಲೂ, ವಯಸ್ಸು ಅಂದಿದ್ದಲ್ಲಿ ಎಂದೂ ಹುಟ್ಟದವ, ತಂದೆತಾಯಿಗಳ ವಿವರ ಅಂದಿದ್ದಲ್ಲಿ ಇಲ್ಲ, ನಾನು ಟೆಸ್ಟ್ ಟ್ಯೂಬ್ ಬೇಬಿ ಅಂತಲೂ, ಸಂಬಂಧಿಗಳು ಅಂದಿದ್ದಲ್ಲಿ ಚರಕ ಪ್ರಸನ್ನ, ವಿಶ್ವೇಶ್ವರಯ್ಯ, ಮದರ್ ಥೇರೆಸಾ ಮತ್ತು ಅಬ್ದುಲ್ ಕಲಾಂ ಅಂತಲೂ, ಹೀಗೆಲ್ಲ ಹೆದರಿಸುವ ವಿಚಿತ್ರ ಪ್ರೊಫೈಲ್ ಕಂಡು ಸರಸ್ವತಿಗೆ ಇನ್ನಷ್ಟು ಕಸಿವಿಸಿಯಾಗಿತ್ತು. ಇಡೀ ಅಕೌಂಟೆಲ್ಲ ಜಾಲಾಡಿದರೂ ನೋಡಲು ಅವನ ಒಂದೂ ಫೋಟೊ ಸಿಗಲಿಲ್ಲ. ಎಲ್ಲ ಅಪ್‌ಡೇಟ್‌ಗಳೂ ಹಳ್ಳಿಗರ ಜೀವನಕ್ರಮ, ರೈತರ ಆತ್ಮಹತ್ಯೆಗೆ ಕಾರಣವಾಗುವ ಸಮಸ್ಯೆಗಳು, ಬರ, ಅತಿವೃಷ್ಟಿಗಳಿಂದ ಆತಂಕಗೊಂಡ ಜನರ ವಿಡಿಯೊ ಕ್ಲಿಪಿಂಗ್‌ಗಳು, ಪರಿಸರ ನಾಶದಿಂದ ಉಂಟಾಗುವ ಭೂಮಿಯ ಭವಿಷ್ಯ, ಅನಾಥಾಶ್ರಮಗಳ ಮಾಹಿತಿ, ವೃದ್ಧಾಶ್ರಮಗಳಲ್ಲಿರುವ ವೃದ್ಧರ ಸಂದರ್ಶನಗಳು, ವೇಶ್ಯಾಗೃಹಗಳಿಂದ ಮುಕ್ತಿ ಪಡೆದು ಸ್ವಾವಲಂಬನೆ ಸಾಧಿಸಿರುವ ಮಹಿಳೆಯರ ವಿವರಗಳು, ಬುದ್ಧಿ ಬೆಳೆಯದ ಹಾಗೂ ಅಂಧಮಕ್ಕಳ ಶಾಲೆಗಳು, ಅಂಗವೈಕಲ್ಯ ಉಳ್ಳವರು ಸಾಧಿಸಿದ ಸಾಧನೆಗಳು, ಕುಷ್ಟರೋಗಿಗಳ ಆರೋಗ್ಯ ಧಾಮಗಳು, ಅಸಹಾಯಕ ಮಹಿಳೆಯರು, ಥರ್ಡ್ ಜೆಂಡರ್ ಹಾಗೂ ಸಲಿಂಗ ಪ್ರೇಮಿಗಳ ಸಮಾನ ಹಕ್ಕುಗಳ ಕುರಿತಾದ ಹೋರಾಟಗಳ ಮಾಹಿತಿ ಹೀಗೆ ನೆಟ್‌ನಿಂದ ಲಿಂಕ್ ತೊಗೊಂಡಂತಹ ಎಲ್ಲ ರೀತಿಯ ಸಾಮಾಜಿಕ ಕಾಳಜಿಯ ಶೇರ್ ಮತ್ತು ಟ್ಯಾಗ್‌ಗಳೇ ತುಂಬಿದ್ದವು. ಈತ ಯಾರಿರಬಹುದು? ಹೇಗಿರಬಹುದು? ಅಥವಾ ಒಬ್ಬ ಮಹಿಳೆಯೂ ಆಗಿರಬಹುದೇ? ಅಂದುಕೊಳ್ಳುತ್ತಲೇ, ಇಷ್ಟೆಲ್ಲ ಸಾಮಾಜಿಕ ಕಳಕಳಿಯುಳ್ಳವ ನನಗೇನೂ